ಚಹಾದ ಗುಟುಕಿನ ಜೊತೆ ಫಿಲಾಸಫಿಯ ಚರ್ಚೆ ಬಿಸಿಯೇರತೊಡಗಿತು.

'ಇರಿ, ನಾನು ಮದುಮಗಳ ಮುಖ ನೋಡಿ ಬರ್ತೀನಿ. ಇವತ್ತು ಅವಳ ಮುಖ ಹೇಗೆ ರಂಗೇರಿದೆ ಅಂತ ನೋಡೇಬಿಡೋಣ...' ಹಾಗಂತ ನಾನು ಹೇಳಿದ್ದು ನನಗೆ ಚೆನ್ನಾಗಿ ನೆನಪಿದೆ.

'ನಮ್ಮನ್ನು ಪಲ್ಲಕ್ಕಿಯವರೆಗೆ ಬರಲು ಬಿಡುವುದಿಲ್ಲ, ನೀವೇ ಹೋಗಿ ನೋಡಿ ಬನ್ನಿ ಆದರೆ ಖಾಲಿ ಕೈಯಲ್ಲಿ ಹೋಗಬೇಡಿ...' ಅಂತ ನಮ್ಮ ಜೊತೆಯಲ್ಲಿ ಬಂದವರು ಹೇಳಿದ್ದರು.

ನಾನು ಮುಗುಳ್ನಗುತ್ತಾ ಪಲ್ಲಕ್ಕಿಯ ಕಡೆಗೆ ಹೋಗಿದ್ದೆ. ಪಲ್ಲಕ್ಕಿಯ ಪರದೆಯನ್ನು ಒಂದು ಕಡೆ ಮೇಲೆತ್ತಲಾಗಿತ್ತು. ನಾನು ಹತ್ತಿರದಲ್ಲಿ ಕೂತಿದ್ದ ಹೆಂಗಸನ್ನು ಕೇಳಿದ್ದೆ, 'ನಾನು ಮದುಮಗಳ ಮುಖವನ್ನು ನೋಡಬಹುದೆ?'

'ಅಮ್ಮಾ, ಜೋಪಾನವಾಗಿ ನೋಡಿ, ನಮ್ಮ ಹುಡುಗಿ ಕೈತೊಳೆದು ಮುಟ್ಟಬೇಕು ಹಾಗಿದ್ದಾಳೆ...' ಎಂದಿದ್ದರು. ನಿಜವಾಗಿಯೂ ಆ ಹುಡುಗಿಯ ಶೃಂಗಾರವೆಂಬ ನತ್ತಿನಲ್ಲಿ ಮುಗುಳುನಗೆಯೆಂಬ ಮುತ್ತು ಥಳಗುಟ್ಟುತ್ತಿತ್ತು. ಆಕೆಯ ರಂಗಿನ ಪ್ರಭೆಯನ್ನು ತಡೆದುಕೊಳ್ಳುವುದು ಸುಲಭವಾಗಿರಲಿಲ್ಲ. ನಾನು ಒಂದು ರೂಪಾಯಿಯನ್ನು ಆಕೆಯ ಅಂಗೈಯ ಮೇಲಿಟ್ಟೆ. ನಾನು ಮರಳಿ ಬಂದಾಗ ನನ್ನ ಸಹಲೇಖಕರು ಹೇಳುತ್ತಿದ್ದರು, 'ಸ್ವಲ್ಪ ಹೊತ್ತಿನ ಹಿಂದೆ ನೀನು ಕವಿತಾವಾಚನ ಮಾಡಿದಾಗ ಕಾಲೇಜಿನ ಎಷ್ಟೋ ಹುಡುಗಿಯರು ತಮ್ಮ ನೋಟುಗಳ ಮೇಲೆ ನಿನ್ನ ಹಸ್ತಾಕ್ಷರ ಪಡೆದುಕೊಂಡಿದ್ದರು.'

'ಪಾಪ, ಅವಳಿಗೇನು ಗೊತ್ತಿತ್ತು... ಆ ರೂಪಾಯಿಯನ್ನು ಅವಳಿಗೆ ಕೊಟ್ಟವರು ಯಾರು ಎಂದು ಗೊತ್ತಿದ್ದಿದ್ದರೆ ಅವಳೂ ಹಸ್ತಾಕ್ಷರವನ್ನು ಪಡೆಯುತ್ತಿದ್ದಳೋ ಏನೋ...' ಎಂದಿದ್ದೆ.

ಎರಡು ವರ್ಷಗಳ ಹಿಂದಿನ ವಿಷಯ. ನನಗೆ ಸಂಪೂರ್ಣವಾಗಿ ನೆನಪಿಗೆ ಬಂತು.

'ಹಾಗಾದರೆ ನೀನು ಆ ಪಲ್ಲಕ್ಕಿಯಲ್ಲಿದ್ದ ಹುಡುಗಿಯೇನು?'

'ಹೌದು ಅಮ್ಮಾವರೆ...'

ಯಾವ ಘಟನೆ ಅವಳನ್ನು ಈ ಎರಡು ವರ್ಷಗಳಲ್ಲಿ ಯುವತಿಯಿಂದ ಹೆಂಗಸಾಗಿ ಮಾಡಿತ್ತೊ ಅರಿಯೆ. ಘಟನೆಯ ಚಿಹ್ನೆಗಳು ಅವಳ ಮುಖದಲ್ಲಿ ಗೋಚರಿಸುತ್ತಿದ್ದವು. ಆದರೂ ಅವಳನ್ನು ಕೇಳುವುದು ಹೇಗೆಂಬ ಸಂದಿಗ್ಧದಲ್ಲಿ ಸಿಲುಕಿದ್ದೆ ನಾನು.

'ಅಮ್ಮಾವರೇ, ನಾನು ನಿಮ್ಮ ಫೋಟೊವನ್ನು ಪತ್ರಿಕೆಯಲ್ಲಿ ನೋಡಿದ್ದೆ. ಒಂದಲ್ಲ, ಎರಡು ಸಲ. ಇಲ್ಲಿ ಎಷ್ಟೊಂದು ಜನ ಬರುತ್ತಾರಲ್ಲ, ಅವರ ಹತ್ತಿರ ದಿನಪತ್ರಿಕೆ ಇರುತ್ತೆ. ಕೆಲವರಂತೂ ರೋಟಿ ತಿನ್ನುತ್ತಾ ತಿನ್ನುತ್ತಾ ಪತ್ರಿಕೆಯನ್ನು ಇಲ್ಲೇ ಬಿಟ್ಟು ಹೋಗುತ್ತಾರೆ.'

'ಹೌದಾ, ಹಾಗಾದರೆ ನೀನು ನನ್ನನ್ನು ಗುರುತು ಹಿಡಿದೆ ಅನ್ನು...'

'ನಾನು ಆ ಕ್ಷಣದಲ್ಲೇ ಗುರುತಿಸಿದೆ, ಆದರೆ ಅಮ್ಮಾವರೇ ಅವರು ನಿಮ್ಮ ಫೋಟೊವನ್ನು ಏಕೆ ಮುದ್ರಿಸುತ್ತಾರೆ?' ನನಗೆ ತಕ್ಷಣಕ್ಕೆ ಈ ಪ್ರಶ್ನೆಗೆ ಉತ್ತರ ಕೊಡಲಾಗಲಿಲ್ಲ. ಯಾರೂ ನನ್ನನ್ನು ಈ ರೀತಿ ಪ್ರಶ್ನಿಸಿರಲಿಲ್ಲ. ನಾನು ಸಂಕೋಚದಿಂದ ಹೇಳಿದೆ, 'ನಾನು ಕತೆ, ಕವಿತೆಗಳನ್ನು ಬರೆಯುತ್ತೀನಲ್ಲ ಅದಕ್ಕೆ...'

'ಕತೆಗಳು? ಅಮ್ಮಾವರೇ ಆ ಕತೆಗಳು ನಿಜವಾದವೋ ಇಲ್ಲ ಸುಳ್ಳೋ?'

'ಕತೆಗಳು ನಿಜವಾದದ್ದೇ ಆಗಿರುತ್ತವೆ, ಆದರೆ ಹೆಸರುಗಳು ಸುಳ್ಳಾಗಿರುತ್ತವೆ, ಬೇರೆಯವರಿಗೆ ತಿಳಿಯಬಾರದಲ್ಲ ಅದಕ್ಕಾಗಿ.'

'ನೀವು ನನ್ನ ಕತೆಯನ್ನೂ ಬರೆಯುವಿರಾ ಅಮ್ಮಾವರೇ?'

'ನೀನು ಬರೀರಿ ಅಂದರೆ ಖಂಡಿತಾ ಬರೆಯುತ್ತೇನೆ.'